# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-** | 646 |
| **ಸದಸ್ಯರ ಹೆಸರು:** | ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ಸಚಿವರು:** | ಮಾನ್ಯ ಕಂದಾಯ ಸಚಿವರು |
| **ಉತ್ತರಿಸಬೇಕಾದ ದಿನಾಂಕ:-** | 12.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ 1.87 ಲಕ್ಷದ ಹಣ ದುರುಪಯೋಗ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಬಂದಿದೆ. |
| (ಆ) | ಬಂದಿದ್ದಲ್ಲಿ ಈ ಹಣದ ದುರುಪಯೋಗದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು) | ಲಿಂಗಸುಗೂರು ತಾಲೂಕಿನ ತಹಶೀಲ್ದಾರ ಕಚೇರಿಯ ಪ್ರಕೃತಿ ವಿಕೋಪ ಸಂಕಲನ ಮತ್ತು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಅನುದಾನದ ಹಣ ದುರುಪಯೋಗ ಆಗದಂತೆ ಆರೋಪಿತ ಸಿಬ್ಬಂದಿಯ ವಿರುದ್ಧ ಪೊಲೀಸ್ ಪ್ರಕರಣ ಸಂಖ್ಯೆ 44/2025 ದಾಖಲಿಸಿದ್ದು ಸದರಿ ಆರೋಪಿತ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಅಮಾನತ್ತಿನಲ್ಲಿ ಇಡಲಾಗಿರುತ್ತದೆ. ಹಾಗೂ ಆರೋಪಿತರ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸಂಪೂರ್ಣವಾಗಿ ಫ್ರೀಜ್ ಮಾಡಿ ಸರ್ಕಾರದ ಹಣವನ್ನು ಸುರಕ್ಷಿತವಾಗಿ ಇಡಲಾಗಿರುತ್ತದೆ. |
| (ಇ) | ಸದರಿ ತಹಶೀಲ್ದಾರ್ ಕಛೇರಿಗೆ ಪ್ರಕೃತಿ ವಿಕೋಪದಿಂದ ಬಂದ ಅನುಧಾನ ಎಷ್ಟು: | ಖಜಾನೆ-2 ರನ್ವಯ ದಿನಾಂಕ:23.06.2023ರಂದು ಒಟ್ಟು ರೂ.52,12,764/- ಅನುದಾನವಿರುತ್ತದೆ. ಮುಂದುವರೆದು, ತಹಶೀಲ್ದಾರ ಲಿಂಗಸುಗೂರು ಇವರ ಹೆಸರಿನಲ್ಲಿ ಪ್ರಕೃತಿ ವಿಕೋಪ ಸಂಕಲನದ ಬ್ಯಾಂಕ್ ಖಾತೆ ಸಂಖ್ಯೆ:- 4210101002942 ಯಲ್ಲಿ ದಿನಾಂಕ:09.01.2025ರ ಅಂತ್ಯಕ್ಕೆ ಉಪಯೋಗಿಸದ ಒಟ್ಟು ಮೊತ್ತ ರೂ. 22,02,206/- ಇರುತ್ತದೆ. ಪ್ರಕೃತಿ ವಿಕೋಪದ ಎಲ್ಲಾ ಪ್ರಕರಣಗಳಿಗೆ ಖಜಾನೆ-2 ಮೂಲಕವೇ ಹಣ ವರ್ಗಾವಣೆಯಾಗುತ್ತದೆ. |
| (ಈ) | ಈ ಅನುದಾನದಲ್ಲಿ ಖರ್ಚಾದ ಅನುದಾನ ಎಷ್ಟು: | ಖಜಾನೆ-2ರನ್ವಯ ಖರ್ಚಾದ ಅನುದಾನ ಒಟ್ಟು ಮೊತ್ತ ರೂ.50,06,108/- |
| (ಉ) | ಮತ್ತು ಉಳಿದ ಅನುದಾನವೆಷ್ಟು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಖಜಾನೆ-2ರನ್ವಯ ಉಳಿದ ಮೊತ್ತ ರೂ.2,06,656/- |

ಸಂಖ್ಯೆ: ಕಂಇ 106 ಎಎಸ್‌ಡಿ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು